Government of Karnataka
Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಪಿ.ಸಿ.ಆರ್. ನಂ.200/2023

ಸಿ ಡಬ್ಲ್ಯೂ- 01

ಸಾಕ್ಷಿದಾರರ ಹೆಸರು :- ಲಚಮಪ್ಪ
ತಂದೆಯ ಹೆಸರು :- ಧರಿಯಪ್ಪ
ವಯಸ್ಸು :- 85 ವರ್ಷ
ಉದ್ಯೋಗ :- ಒಕ್ಕಲುತನ
ವಾಸಸ್ಥಳ :- ಮಿಂಚೇರಿ ತಾಂಡ-2

**ದಿ.23-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಪ್ರಮಾಣಿಕೃತ ಹೇಳಿಕೆ :-***

ನಮ್ಮ ತಾತನ ಹೆಸರು ರೇಖಪ್ಪ. ರೇಖಪ್ಪನಿಗೆ ಇಬ್ಬರು ಮಕ್ಕಳು ಅವರು ಆಲೆಪ್ಪ ಮತ್ತು ಧರಿಯಪ್ಪ. ಆಲೆಪ್ಪನಿಗೆ 3 ಜನ ಮಕ್ಕಳು ಅವರು ಭೀಮಪ್ಪ, ರಾಮಪ್ಪ ಮತ್ತು ಸೋಮಪ್ಪ. ಧರಿಯಪ್ಪನಿಗೆ ನಾನು ಮತ್ತು ಸೋಮಲೆಪ್ಪ ಇಬ್ಬರು ಮಕ್ಕಳು. ನಮ್ಮ ತಾತನ ಹೊಲದ ಸರ್ವೆ ನಂ.41 ವಿಸ್ತೀರ್ಣ 3 ಎಕರೆ 22 ಗುಂಟೆ ಇದ್ದು ಮತ್ತು ಅದೇ ಸರ್ವೆ ನಂಬರಿನಲ್ಲಿ 6 ಎಕರೆ 32 ಗುಂಟೆ ಜಮೀನು ಇತ್ತು. ನಾನು ರೇಖ್ಯಾರವರ ಕಡೆಯಿಂದ 3 ಎಕರೆ 22 ಗುಂಟೆಗೆ ಖಾತಾ ಬದಲಾವಣೆ ಮಾಡಿಸಿಕೊಂಡಿರುತ್ತೇನೆ. ಈ ಹೊಲಕ್ಕೆ ಸಂಬಂಧಿಸಿದಂತೆ ಧರ್ಮಪ್ಪ ಈತನು ತಾನು ರೇಖಪ್ಪನ ಮಗ ಎಂದು ತಿದ್ದುಪಡಿ ಮಾಡಿಕೊಡಲು ಎ.ಸಿ. ರವರ ಮುಂದೆ ಕೇಸು ಮಾಡಿದ್ದನು. ಸದರಿ ಹೊಲ ಆತನ ತಂದೆಯದು ಎಂದು ಕೇಸು ಮಾಡಿದ್ದನು. ಆದಾರ್ ಕಾರ್ಡನಲ್ಲಿ ಧರ್ಮಪ್ಪನ ತಂದೆಯ ಹೆಸರನ್ನು ರೇಖಪ್ಪ ಎಂದು ತಿದ್ದುಪಡಿ ಮಾಡಿರುತ್ತಾರೆ. ಆದರೆ ಆತನ ತಂದೆಯ ಹೆಸರು ಕೇಶಪ್ಪ ಇರುತ್ತದೆ. ಎ.ಸಿ. ಕೋರ್ಟನಲ್ಲಿ ಕೇಸು ನಮ್ಮಂತೆ ಆಗಿರುತ್ತದೆ. ಆಗ ಧರ್ಮಪ್ಪ ಈತನು ಮೋಸ ಮಾಡಿದ್ದನು ಎಂದು ಪೋಲಿಸ್ ಠಾಣೆಯಲ್ಲಿ ಕೇಸು ಕೊಟ್ಟಿರುತ್ತೇನೆ. ಕೇಸು ಆದ ಮೇಲೆ ಪೋಲಿಸರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆದಕಾರಣ ನಾನು ನ್ಯಾಯಾಲಯದಲ್ಲಿ ಈ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ಈ ಕೇಸನ್ನು ಧರ್ಮಪ್ಪ ತಂದೆ ಕೇಶಪ್ಪ, ಮಂಗಲೆಪ್ಪ, ಶಂಕ್ರಪ್ಪನ ಹೆಂಡತಿ ಮತ್ತು ಮಕ್ಕಳ ಮೇಲೆ ಹಾಗೂ ಸೋಮಲೆವ್ವ, ಕಸನಪ್ಪ, ಕಸ್ತೂರೆಪ್ಪ ಮತ್ತು ಕೃಷ್ಣಪ್ಪ ರವರ ಮೇಲೆ ಕೇಸು ಮಾಡಿರುತ್ತೇನೆ. ಆರೋಪಿತರು ಹೊಲ ಕಬಳಿಸುವ ಸಲುವಾಗಿ ನಮಗೆ ಮೋಸ ಮಾಡಿರುತ್ತಾರೆ.

2. ಎರಡು ಆದಾರ್ ಕಾರ್ಡಿನ ದೃಡಕೃತ ನಕಲುಗಳನ್ನು ನಿ.ಸಿ-1 ಮತ್ತು 2 ಎಂದು, ಜಮೀನು ಖರೀದಿ ಪತ್ರದ ದೃಡಿಕೃತ ನಕಲನ್ನು ನಿ.ಸಿ-3 ಎಂದು, ಸರ್ವೆ ನಂ.44/15 ರ ಪಹಣಿ ಪತ್ರಿಕೆಯನ್ನು ನಿ.ಸಿ-4 ಎಂದು, ಮಾನ್ಯ ಸಹಾಯಕ ಆಯುಕ್ತರು ರವರ ಮುಂದೆ ಸಲ್ಲಸಿದ ಅಪೀಲು ಮೆಮೊವನ್ನು ನಿ.ಸಿ-5 ಎಂದು, ಆನೆಹೊಸೂರು ಗ್ರಾಮದ 1978 ರಿಂದ 2025 ವರೆಗಿನ ಮತದಾರರ ಪಟ್ಟಿಯನ್ನು ನಿ.ಸಿ-6 ರಿಂದ 10 ಎಂದು, ಓ.ಎಸ್.ನಂ.80/2022 ರ ತಿದ್ದುಪಡಿ ವಾದ ಪತ್ರ ದೃಡಿಕೃತ ನಕಲನ್ನು ನಿ.ಸಿ-11 ಎಂದು, ಓ.ಎಸ್.ನಂ.80/2022 ರ ಐ.ಎ.ನಂ.3 ರ ದೃಡಿಕೃತ ನಕಲನ್ನು ನಿ.ಸಿ-12 ಎಂದು, ಅದರ ತಕರಾರಿನ ದೃಡಿಕೃತ ನಕಲನ್ನು ನಿ.ಸಿ-13 ಎಂದು, ಐ.ಎ.ನಂ.3 ರ ಆದೇಶದ ದೃಡಿಕೃತ ನಕಲನ್ನು ನಿ.ಸಿ-14 ಎಂದು, ಪ್ರತಿವಾದ ಪತ್ರದ ದೃಡಿಕೃತ ನಕಲನ್ನು ನಿ.ಸಿ-15 ಎಂದು, ವಂಶವೃಕ್ಷದ ದೃಡಿಕರಣ ಪತ್ರವನ್ನು ನಿ.ಸಿ-16 ಎಂದು, ಆಧಾರ್ ಕಾರ್ಡನ್ನು ನಿ.ಸಿ-17 ಎಂದು ಗುರುತಿಸಲಾಯಿತು.

ಮುಂದುವರೆದ ಪ್ರಮಾಣಿಕಕೃತ ಹೇಳಿಕೆಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.